'ಹೆಜ್ಜೆ ಮೂಡಿದ ಹಾದಿ'. ಈ ತನಕ ಆರು ಕಥಾ ಸಂಕಲನಗಳನ್ನು, ಒಂದು ಕಾದಂಬರಿಯನ್ನು ಮತ್ತು ಇತರ ಬರವಣಿಗೆಗಳನ್ನು ಪ್ರಕಟಿಸಿರುವ ಬಾನು ಅವರ ಒಟ್ಟೂ ಬರವಣಿಗೆ ಹೆಜ್ಜೆ ಮೂಡಿದ ಹಾದಿಯನ್ನು ಮಾತ್ರವಲ್ಲ, ಹೆಜ್ಜೆ ಊರಿದ ಹಾದಿಯನ್ನೂ ಸಂಕೇತಿಸುತ್ತಿದೆ. ಮೂಡುವ ಮತ್ತು ಊರುವುದರ ನಡುವಿನದ್ದು ಕಡು ಕಷ್ಟದ ಪ್ರಯಾಣ. ಮೂಡುವುದನ್ನೇ ಒಪ್ಪದ ಗಂಡಾಳಿಕೆ ಊರುವುದಕ್ಕಂತೂ ಇನ್ನಿಲ್ಲದ ಸವಾಲುಗಳನ್ನು ಒಡ್ಡುತ್ತದೆ. ಅವರ 'ಎದೆಯ ಹಣತೆ' ಸಂಕಲನಕ್ಕೆ ಮುನ್ನುಡಿ ಬರೆಯುವ ಹೊತ್ತಿನಲ್ಲಿ ನಾನು, 'ಬಾನು ಅವರಿಗೆ ಪ್ರಶ್ನೆಗಳು, ಸವಾಲುಗಳು ತೀವ್ರವಾಗಿ ಕಂಡಷ್ಟು ಉತ್ತರಗಳು ಮತ್ತು ಪರಿಹಾರಗಳು ಕಾಣುತ್ತಿಲ್ಲವೇನೋ' ಎನ್ನುವ ಮಾತು ಹೇಳಿದ್ದೆ. ಆದರೆ ಅವರ ನಂತರದ ಕಥೆಗಳು ಉತ್ತರವನ್ನೂ ಶಕ್ತವಾಗಿಯೇ ಹುಡುಕಿವೆ. ಉತ್ತರದ ಹಲವು ಮಾದರಿ ಮತ್ತು ಸಾಧ್ಯತೆಗಳನ್ನು ಅವರ ಉತ್ತರಾರ್ಧದ ಕಥೆಗಳು ಗಂಭೀರವಾಗಿ, ಪ್ರಾಯೋಗಿಕವಾಗಿ ಹುಡುಕುತ್ತಿವೆ. ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಯಂತೆಯೇ ಉತ್ತರ ಹುಡುಕುವುದೂ ಅಷ್ಟೇ ತುರ್ತಿನದು ಎನ್ನುವುದನ್ನು ಅವರ ಇತ್ತೀಚಿನ ಕಥೆಗಳು ಸಾದರಪಡಿಸುತ್ತಿವೆ.

'ಎದೆಯ ಹಣತೆ' ಸಂಕಲನದ 'ಒಮ್ಮೆ ಹೆಣ್ಣಾಗು ಪ್ರಭುವೆ' ಕಥೆಯ ಕಾರಣಕ್ಕೆ ತನ್ನ ಸಮುದಾಯದ ಫತ್ವಾದ ಬೆದರಿಕೆಯನ್ನೂ ಎದುರಿಸಿದ್ದ ಬಾನು ಆ ಹೊತ್ತಿಗಾಗಲೇ ಲಂಕೇಶರ ಸಂಸರ್ಗದಲ್ಲಿ, ತಮ್ಮದೇ ತಾತ್ವಿಕ ಸ್ಪಷ್ಟತೆಯಲ್ಲಿ ತಮ್ಮ ನಿಲುವಿನಲ್ಲಿ ರಾಜಿ ಮಾಡಿಕೊಳ್ಳುವ ಹಂತವನ್ನು ದಾಟಿದ್ದರು. (ಇಲ್ಲಿ ಲಂಕೇಶ್ ಮತ್ತು 'ಲಂಕೇಶ್ ಪತ್ರಿಕೆ'ಯ ಬಗ್ಗೆ ಒಂದು ಮಾತನ್ನು ಅವಶ್ಯವಾಗಿ ಹೇಳಲೇಬೇಕು. ಕರ್ನಾಟಕದ ಮಹಿಳಾ ಸಂಕಥನಕ್ಕೆ ಲಂಕೇಶ್ ಅವರ ಕೊಡುಗೆ ಮಹತ್ವದ್ದು. 'ಆಕಾಶ, ಮಳೆ ಮತ್ತು ನಕ್ಷತ್ರಗಳ ಮುಕ್ತ ಛಂದಸ್ಸು' ಎನ್ನುವ ಲೇಖನದಲ್ಲಿ ಇದನ್ನು ವಿವರವಾಗಿ ಚರ್ಚಿಸಿದ್ದೇನೆ. ಬಾನು ಮುಷ್ತಾಕ್, ಸಾರಾ ಅಬೂಬಕರ್ ಅವರೂ ಸೇರಿದಂತೆ ಲಲಿತಾ ನಾಯಕ್, ಉತ್ತನೂರು ರಾಜಮ್ಮ ಮೊದಲಾದವರನ್ನು ಲೇಖಕಿಯರನ್ನಾಗಿ ರೂಪಿಸುವಲ್ಲಿ ಲಂಕೇಶರಿಗಿದ್ದ ಕಾಳಜಿ ಮತ್ತು ನಂಬಿಕೆ ಕನ್ನಡ ಮಹಿಳಾ ಸಾಹಿತ್ಯಕ್ಕೂ ಮಹಿಳೆಯರ ಹೋರಾಟಕ್ಕೂ ನೀಡಿದ ನೈತಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬೆಂಬಲ ಎಷ್ಟು ನಿರ್ಣಾಯಕವಾದುದು ಎನ್ನುವುದನ್ನು ಕನ್ನಡ ಜಗತ್ತು ಇನ್ನೂ ವಿವರವಾಗಿ ಚರ್ಚಿಸಬೇಕು. ವೈದೇಹಿಯವರ ಬರವಣಿಗೆಗೂ ಆ ಹೊತ್ತಿಗಾಗಲೇ ಪರಿಚಿತವಾಗಿದ್ದರೂ ಲಂಕೇಶ್ ಪತ್ರಿಕೆಯ ಮೂಲಕ ಅವರಿಗೆ ಸಿಕ್ಕ ಜನಮನ್ನಣೆಗೆ ವಿಶೇಷವಾದ ಸ್ಥಾನವಿದೆ). ಈ ಫತ್ವಾವನ್ನು ಅವರು ನೈತಿಕ ಬಲದಿಂದಲೇ ಎದುರಿಸಿದರು. 'ಸತ್ತರೂ ನಾನು ಬರೆಯುವುದನ್ನು ನಿಲ್ಲಿಸಲಾರೆ' ಎನ್ನುವ ಮಾತನ್ನು ಅಬ್ಬರಿಸಿಯಲ್ಲ, ಲೋಕ ಬೆಚ್ಚುವ ಗಾಂಭೀರ್ಯ ಮತ್ತು ಬದ್ಧತೆಯಲ್ಲಿ ಹೇಳಿದವರು ಬಾನು. ಅದರ ನಂತರದ ಬರವಣಿಗೆಯಲ್ಲಿ ಅವರು ಮುಂದಕ್ಕೆ ಚಲಿಸಿದರೇ ಹೊರತು ಹಿಂದಕ್ಕಲ್ಲ ಎನ್ನುವುದನ್ನು ಗಮನಿಸಬೇಕು. ಅವರ ಬರವಣಿಗೆಗೆ ಜಾಗತಿಕ ಮನ್ನಣೆ ಸಿಕ್ಕಿರುವ ಈ ಹೊತ್ತಿನಲ್ಲಿ ತಮ್ಮನ್ನು ತಾವೇ ಅವರು ಗಟ್ಟಿಗೊಳಿಸಿಕೊಳ್ಳುತ್ತಾ ಹೋದ ಪ್ರಕ್ರಿಯೆಯನ್ನು ಲೋಕ ತಿಳಿದುಕೊಳ್ಳಬೇಕಾದ್ದು ಅವರನ್ನು ಗೌರವಿಸುವ ನಿಜ ಪರಿ. ಬಾಬಾ ಬುಡನ್ ಗಿರಿಯ ಹೋರಾಟವಿರಬಹುದು, ಕೋಮು ಸೌಹಾರ್ದ ವೇದಿಕೆಯ ಜೊತೆಗಿನ ಅವರ ಕರುಳಬಳ್ಳಿಯ ಸಂಬಂಧವಿರಬಹುದು, ಮಿಕ್ಕ ವಕೀಲರು ತೆಗೆದುಕೊಳ್ಳಲು ಹಿಂಜರಿಯುವ, ಒಲ್ಲದ ಕೇಸುಗಳನ್ನು ಇವರು ತೆಗೆದುಕೊಳ್ಳುವುದಿರಬಹುದು ಈ ಎಲ್ಲವೂ ಅವರ ವ್ಯಕ್ತಿತ್ವವನ್ನು ರೂಪಿಸಿವೆ ಮತ್ತು ಬರವಣಿಗೆಯ ಸ್ವರೂಪವನ್ನೂ ನಿರ್ಧರಿಸಿವೆ.

2

ಬಾನು ಅವರ ಈವರೆಗಿನ ಕಥೆಗಳನ್ನು ಓದಿದರೆ ಹೆಣ್ಣಿನ ಹೋರಾಟದ ಘಟ್ಟಗಳೆಲ್ಲವೂ ಕಾಣಿಸುತ್ತವೆ. ಆರಂಭದ ಘಟ್ಟದ ವ್ಯಂಗ್ಯ, ಆಕ್ರೋಶ, ಅಸಹಾಯಕತೆಯನ್ನು ಒಪ್ಪಿಕೊಳ್ಳಲೂ ಆಗದ, ಎದುರಿಸಲೂ ಆಗದ ಸಂದಿಗ್ಧತೆಯನ್ನು ಗೇಲಿಯ, ರೋಷಾವೇಷದ ಮಾತುಗಳಲ್ಲಿ ವ್ಯಕ್ತಪಡಿಸುವ ಬಗೆ ಈ ಎಲ್ಲವನ್ನೂ 'ಶಾಹಿಸ್ತಾ ಮಹಲ್ಲಿನ ಕಲ್ಲು ಚಪ್ಪಡಿಗಳು' ಕಥೆ ಭಾವಾವೇಶದ ಎಂದು ಕರೆಯಬಹುದಾದ ರೀತಿಯಲ್ಲೇ ಕಟ್ಟಿಕೊಡುತ್ತದೆ. ಆದರೆ ಕಥೆ ಓದುಗರಲ್ಲಿ ಮೂಡಿಸುವ ದಟ್ಟ ಭಾವವೆಂದರೆ ಹೆಣ್ಣಿನ ಅರಿವಿನ ಪ್ರಜ್ಞೆಯದ್ದು. ಗಂಡನನ್ನು ಗಂಡ ಎಂದು ಪರಿಚಯಿಸುವುದೇ ಅಸಹಜವಾಗಿ ಕಾಣಿಸುವ ಪತಿ